1	2	3	4
14.	Gadag	320	333.59
15.	Gulbarga	429	1028.54
16.	Hassan	576	844.57
17.	Haveri	237	286.00
18.	Karwar	1154	1809.27
19.	Kodagu	150	378.03
20.	Kolar	1625	3662.06
21.	Koppal	235	985.35
22.	Mandya	401	576.81
23.	Mysore	913	2452.00
24.	Raichur	242	616.61
25.	Shimoga	421	695.91
26.	Tumkur	1269	2681.62
27.	Udupi	905	1653.75
	Total	18279	40567.36

ಬೆಂಗಳೂರು ನಗರದಲ್ಲಿ ಬಿಕ್ಷುಕರ ಸಂಖ್ಯೆಯ ಹೆಚ್ಚಳ

277 (585): ಶ್ರೀ ಸುಬ್ಬಾರೆಡ್ಡಿ ಕೆ.ಎಸ್. (ಬಸವನಗುಡಿ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಭಿಕ್ಷುಕರ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಭಿಕ್ಷಾಟನೆ ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) 1. ಕರ್ನಾಟಕ ಪೊಲೀಸ್ ಹಾಗೂ ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರದ ಕಾರ್ಯಪಾಲಕ ಸಿಬ್ಬಂದಿಯವರು ಬೆಂಗಳೂರು ನಗರದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ಕರ್ನಾಟಕ ಭಿಕ್ಷಾಟನಾ ನಿಷೇಧ ಅಧಿನಿಯಮ 1975 ರನ್ವಯ ಬಂಧಿಸಿ ನಿರಾಶ್ರಿತರ ಪರಿಹಾರ ಕೇಂದ್ರ ಮಾಗಡಿ ರಸ್ತೆ, ಬೆಂಗಳೂರು, ಇಲ್ಲಿ ಇರಿಸಲಾಗುತ್ತಿದೆ. ವಾರದಲ್ಲಿ ಕನಿಷ್ಠ ನಾಲ್ಕು ದಿವಸ ಇಂತಹ ಬಂಧನಗಳನ್ನು ಮಾಡಲಾಗುತ್ತಿದೆ.

2. ಭಿಕ್ಷಾಟನೆಗೆ ಉತ್ತೇಜನ ನೀಡಬಾರದು ಎಂಬುದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಕರಪತ್ರಗಳನ್ನು ಹಂಚಲಾಗುತ್ತಿದೆ.

3. ಬಿಕ್ಷಾಟನೆಯನ್ನು ಪ್ರೋತ್ಸಾಹಿಸದಿರಲು ಸಾರ್ವಜನಿಕರ ತಿಳುವಳಿಕೆಗಾಗಿ ಸಾಕ್ಷ್ಯಚಿತ್ರವನ್ನು ನಿರ್ಮಿಸಿ ದೂರದರ್ಶನದಲ್ಲಿ ಪ್ರಸಾರ ಮಾಡಲಾಗಿದೆ.

4. ಬಂಧನದಲ್ಲಿರುವ ನಿರಾಶ್ರಿತರಿಗೆ ಉಚಿತ ವಸತಿ, ಊಟ, ಸಮವಸ್ತ್ರ ಹಾಸಿಗೆ ಹೊದಿಕೆಗಳನ್ನು ನೀಡುವುದಲ್ಲದೆ, ಆರೋಗ್ಯವಂತರಾದ ನಿರಾಶ್ರಿತರಿಗೆ ವಿವಿಧ ವೃತ್ತಿಗಳಲ್ಲಿ ಅಂದರೆ ಹೊಲಿಗೆ, ನಾರು ನೇಯ್ಗೆ, ಬೆತ್ತದ ಹೆಣಿಗೆ, ಬುಕ್ ಬೈಂಡಿಂಗ್, ವ್ಯವಸಾಯ, ತೋಟಗಾರಿಕೆಗಳಲ್ಲಿ ತರಬೇತಿ ನೀಡಲಾಗುವುದು, ತರಬೇತಿಯ ಅವಧಿಯಲ್ಲಿ ಪ್ರತಿ ನಿರಾಶ್ರಿತರಿಗೆ ಪ್ರತಿ ದಿನ ರೂ. 5.00 ಗಳಂತೆ ದಿನಗೂಲಿ ನೀಡಲಾಗುತ್ತಿದೆ. ಹೀಗೆ ತರಬೇತಿ ಹೊಂದಿರುವ ಕೆಲವು ನಿರಾಶ್ರಿತರು ಬಿಡುಗಡೆ ಹೊಂದಿದ ನಂತರ ಸ್ವಾವಲಂಬಿಗಳಾಗಿ ಜೀವನದಲ್ಲಿ ಪರಿವರ್ತನೆಗೊಂಡಿರುವುದು ಕಂಡುಬಂದಿದೆ.

5. ಬಂಧಿತ ನಿರಾಶ್ರಿತರಿಗೆ ಪರಿಪೂರ್ಣ ತರಬೇತಿ ನೀಡಲು ಅವಕಾಶವಾಗುವಂತೆ ಗರಿಷ್ಠ 12 ತಿಂಗಳು ಇದ್ದ ಬಂಧನದ ಅವಧಿಯನ್ನು ಒಂದು ವರ್ಷಕ್ಕೆ ಕಡಿಮೆ ಇರತಕ್ಕದ್ದಲ್ಲದ ಅಂದರೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂತಹ ಅವಧಿ ನಿಗಿದಿಗೊಳಿಸಿ ಖಾಯಿದೆಯಲ್ಲಿ ಸೆಕ್ಷನ್ 12ಕ್ಕೆ ತಿದ್ದುಪಡಿ ತರಲಾಗಿದೆ. ಬಂಧನದಲ್ಲಿರುವ ನಿರಾಶ್ರಿತರನ್ನು ಕೇವಲ ಜಾಮೀನಿನ ಮೇಲೆ ಆಗಿಂದಾಗ್ಗೆ ಬಿಡುಗಡೆ ಮಾಡಬಹುದಾಗಿದ್ದರಿಂದ ಸದರಿ ಕಾಯಿದೆಯ ಸೆಕ್ಷನ್ 1 (4) ರಲ್ಲಿ ರೂ. 1000–00 ಗಳ ಬಂಧಪತ್ರ ನೀಡಿ ಬಿಡುಗಡೆ ಮಾಡಿಸಿಕೊಳ್ಳಲು ಕಾಯಿದೆಯಲ್ಲಿ ತಿದ್ದುಪಡಿ ತರಲಾಗಿದೆ ಇದರಿಂದಾಗಿ ನಿರಾಶ್ರಿತರು ಆಗಿಂದಾಗ್ಗೆ ಬಿಡುಗಡೆ ಆಗುವುದನ್ನು ತಡೆಗಟ್ಟಲಾಗಿದೆ.

6. ಭಿಕ್ಷಾಟನೆಯನ್ನು ಪ್ರೋತ್ಸಾಹಿಸದಿರಲು ಸಾರ್ವಜನಿಕರ ತಿಳುವಳಿಕೆಗಾಗಿ ಬೆಂಗಳೂರು ನಗರದಲ್ಲಿನ ಈ ಕೆಳಕಂಡ ಪ್ರಮುಖ ಸ್ಥಳಗಳಲ್ಲಿ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಗಿದೆ.

ಅ) ಬೆಂಗಳೂರು ಬಸ್ ನಿಲ್ದಾಣ ಆ) ಕಂಟೋನ್ಮೆಂಟ್ ನಿಲ್ದಾಣ ಇ) ಮಲ್ಲೇಶ್ವರಂ ಸರ್ಕಲ್ ಬಸ್‌ನಿಲ್ದಾಣ ಈ) ಶಿವಾಜಿನಗರ ಬಸ್‌ನಿಲ್ದಾಣ ಉ) ಕಲಾಸಿ ಪಾಳ್ಯಂ ಬಸ್ ನಿಲ್ದಾಣ ಊ) ಸಿಟಿ ಮಾರ್ಕೆಟ್ ಮುಂಭಾಗ ಋ) ಬೆಂಗಳೂರು ಮಹಾನಗರ ಪಾಲಿಕೆ ಮುಂಭಾಗ ಠ) ಯಶವಂತಪುರ ಸರ್ಕಲ್ ಎ) ಮಹಾತ್ಮಾಗಾಂಧಿ ರಸ್ತೆ ಏ) ಹೊಸೂರು ರಸ್ತೆ ಜಂಕ್ಷನ್ ಐ) ಅಲಸೂರು ಬಸ್ ನಿಲ್ದಾಣ ಒ) ಕೆಂಪೇಗೌಡ ವೃತ್ತ ಓ) ಜಯನಗರ ಬಸ್ ನಿಲ್ದಾಣ

ಕಾಮಗಾರಿಗಳ ವಿವರ

278 (545): ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೆ.ಯು.ಐ.ಡಿ.ಎಫ್.ಸಿ. ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ನಗರ ಮೂಲಭೂತ ಸೌಕರ್ಯ ಮತ್ತು ಹಣಕಾಸು ಅಭಿವೃದ್ಧಿ ನಿಗಮದಿಂದ ಅನುಮೋದನೆಗೊಂಡ ಎಷ್ಟು ಕಾಮಗಾರಿಗಳು ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ನಡೆಯುತ್ತಿದೆ (2002–03, 2003–04 ರ ವಿವರಗಳನ್ನು ನೀಡುವುದು);

ಆ) ಈಗ ಅನುಮೋದನೆಗೊಂಡ ಕಾಮಗಾರಿ ಪ್ರಾರಂಭವಾಗಬೇಕಿರುವ ಕೆಲಸಗಳು ಯಾವುವು: (ವಿವರಗಳನ್ನು ನೀಡುವುದು.